## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಡಾ: ಚಂದ್ರಶೇಖರ್ ಬಿ.ಪಾಟೀಲ್ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1407** |
| ಉತ್ತರಿಸಬೇಕಾದ ದಿನಾಂಕ | : | 09.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಆಶ್ರಯ, ಅಂಬೇಡ್ಕರ್, ಬಸವ ಹಾಗೂ ಇತರೆ ಯೋಜನೆಗಳು, ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಸ್ಥಗಿತಗೊಂಡಿದ್ದು, ಬಡ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯಲ್ಲಿ 2010-11 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ಆಶ್ರಯ, ಅಂಬೇಡ್ಕರ್, ಬಸವ ಹಾಗೂ ಇತರೆ ಯೋಜನೆಗಳಡಿ ನೀಡಲಾದ ಮನೆಗಳ ವಿವರ ಕೆಳಕಂಡಂತಿದೆ. |
| ಆ) | ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ? | |

| ಯೋಜನೆ | ಮಂಜೂರಾದ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು | ಬ್ಲಾಕ್ ಆದ ಮನೆಗಳು |
|---|---|---|---|---|---|
| ಬಸವ ವಸತಿ ಯೋಜನೆ | 46813 | 34087 | 7854 | 1 | 4871 |
| ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ (ಗ್ರಾಮೀಣ) | 23912 | 14714 | 7357 | 8 | 1833 |
| ದೇವರಾಜು ಅರಸು ವಸತಿ (ಗ್ರಾಮೀಣ) | 4598 | 2440 | 1353 | 436 | 369 |
| ಪ್ರಧಾನ ಮಂತ್ರಿ ಆವಾಸ್ – ಗ್ರಾಮೀಣ | 26152 | 23211 | 1767 | 43 | 1131 |
| ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ (ನಗರ) | 2413 | 1494 | 628 | 0 | 291 |
| ದೇವರಾಜು ಅರಸು ವಸತಿ (ನಗರ) | 144 | 23 | 30 | 17 | 74 |
| ವಾಜಪೇಯಿ ನಗರ ವಸತಿ | 4096 | 2290 | 988 | 38 | 780 |
| ಪ್ರಧಾನ ಮಂತ್ರಿ ಆವಾಸ್– (ನಗರ) AHP* | 2004 | 1538 | 466 | 0 | 0 |
| ಪ್ರಧಾನ ಮಂತ್ರಿ ಆವಾಸ್– ನಗರ Non convergence | 3256 | 0 | 3 | 3253 | 0 |
| **ಒಟ್ಟು** | **113388** | **79797** | **20446** | **3796** | **9349** |

* ಪ್ರಧಾನ ಮಂತ್ರಿ ಆವಾಸ್ AHP ಯೋಜನೆಯಡಿ ಒಟ್ಟು 12175 ಮನೆ ಮಂಜೂರಾಗಿದ್ದು, ಈ ಪೈಕಿ 10171 ಮನೆಗಳು ಪ್ರಾರಂಭವಾಗಬೇಕಿರುತ್ತದೆ.

ಮೇಲೆ ತಿಳಿಸಿದಂತೆ ಮಂಜೂರಾದ ಮನೆಗಳ ಫಲಾನುಭವಿಗಳು ಇಂದಿರಾ ಮನೆ ಮೊಬೈಲ್ ಆಪ್ ಮೂಲಕ ಅಪ್ಲೋಡ್ ಮಾಡಲಾಗುವ ಜಿಪಿಎಸ್ ಭೌತಿಕ ಪ್ರಗತಿ ಆಧಾರದ ಮೇಲೆ ಫಲಾನುಭವಿಗಳ ಖಾತೆಗೆ ನೇರವಾಗಿ ಅನುದಾನವನ್ನು ಜಮಾ ಮಾಡಲಾಗುತ್ತಿದ್ದು, ಯಾವುದೇ ಯೋಜನೆಯು ಸ್ಥಗಿತಗೊಂಡಿರುವುದಿಲ್ಲ.

ಮೇಲ್ಕಂಡ ಯೋಜನೆಗಳಡಿ ಆರ್ಥಿಕ ವರ್ಷ 2010-11 ನೇ ಸಾಲಿನಿಂದ 2021-22 ನೇ ಸಾಲಿನ ಈವರೆಗೆ ಒಟ್ಟು 1005.29 ಕೋಟಿಗಳನ್ನು ಬಿ.ಎಲ್.ಸಿ. ಘಟಕದಡಿ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ, ಎ.ಹೆಚ್.ಪಿ ಘಟಕದಡಿ ಈವರೆಗೆ ರೂ.54.75 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ವಿವರ ಕೆಳಕಂಡಂತಿದೆ.

| ಶ್ರೇಣಿ | ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ) | |
|---|---|---|
| | ಬಿ.ಎಲ್.ಸಿ | ಎ.ಎಚ್.ಪಿ |
| 2010-11 | 0.02 | - |
| 2011-12 | 11.97 | - |
| 2012-13 | 41.70 | - |
| 2013-14 | 46.09 | - |
| 2014-15 | 98.42 | - |
| 2015-16 | 93.42 | |
| 2016-17 | 147.25 | |
| 2017-18 | 201.20 | |
| 2018-19 | 184.95 | 54.75 |
| 2019-20 | 62.71 | |
| 2020-21 | 71.96 | |
| 2021-22 | 45.61 | |
| **Total** | **1005.29** | **54.75** |

2021-22 ನೇ ಸಾಲಿಗೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯ ಒಟ್ಟು ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಗ್ರಾಮಪಂಚಾಯಿತಿಗಳನ್ನು A, B ಮತ್ತು C ಎಂದು ವರ್ಗೀಕರಿಸಿ ಹೊಸ ಮನೆಗಳ ಗುರಿಯನ್ನು ನಿಗದಿಪಡಿಸಿದ್ದು, ಅದರನ್ವಯ ಬೀದರ್ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಗೆ ಒಟ್ಟು 7060 ಮನೆಗಳ

ಗುರಿಯನ್ನು ಹಂಚಿಕೆ ಮಾಡಲಾಗಿದ್ದು, ಯೋಜನೆವಾರು ವಿವರ ಕೆಳಕಂಡಂತಿದೆ.

| ಯೋಜನೆ | ಗುರಿ |
|---|---|
| ಬಸವ ವಸತಿ ಯೋಜನೆ | 5329 |
| ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ | 1731 |
| **ಒಟ್ಟು** | **7060** |

2021-22ನೇ ಸಾಲಿಗೆ ನಗರ ಪ್ರದೇಶದಲ್ಲಿ ನಗರ ಸ್ಥಳೀಯ ಸಂಸ್ಥೆವಾರು ಅಂದರೆ ಮಹಾನಗರ ಪಾಲಿಕೆಗೆ 300, ನಗರಸಭೆಗೆ 100, ಪುರಸಭೆ 75, ಪಟ್ಟಣ ಪಂಚಾಯಿತಿಗೆ 50 ರಂತೆ ಹೊಸ ಮನೆಗಳ ಗುರಿಯನ್ನು ನಿಗದಿಪಡಿಸಿದ್ದು, ಅದರನ್ವಯ ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 550 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿದ್ದು, ಯೋಜನೆವಾರು ವಿವರ ಕೆಳಕಂಡಂತಿದೆ.

| ಯೋಜನೆ | ಗುರಿ |
|---|---|
| ವಾಜಪೇಯಿ ನಗರ ವಸತಿ ಯೋಜನೆ | 418 |
| ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ) | 132 |
| **ಒಟ್ಟು** | **550** |

ಈ ಹೊಸ ಮನೆಗಳ ಗುರಿಗೆ ತಕ್ಕಂತೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ :ವಇ 124 ಹೆಚ್‌ಎಎಂ 2021

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು